# ಲಂಟಾನ ಸುಂದರಿಯ ಪಾತರಗಿತ್ತಿ ಸ್ನೇಹ

■ ಚಿತ್ರ– ಬರಹ: **ಲಕ್ಷ್ಮೀಕಾಂತ್ ಎಲ್.ವಿ**

ಬಣ್ಣದಿಂದಲೇ ಆಕರ್ಷಿಸುವ ಲಂಟಾನ ಎಂಬ ಸುಂದರಿಯ ಚೆಲುವನ್ನು ವರ್ಣಿಸಲು ಅಸಾಧ್ಯ. ಎಲ್ಲೆಲ್ಲೂ ಕಂಡುಬರುವ ಲಂಟಾನ ಸಸ್ಯದ ಹೂಗಳ ಚೆಲುವು ಎಂಥವರನ್ನೂ ಆಕರ್ಷಿಸುತ್ತದೆ. ಯಾರ ಮುಡಿಗೂ ಏರದೆ, ಯಾವ ದೇವರ ಪೂಜೆಗೂ ಬಳಸಲ್ಪಡದೇ ತನ್ನಷ್ಟಕ್ಕೇ ತಾನುಳಿದು ಅಳಿದು ಹೋಗುವ ಈ ಸುಂದರ ಸುಮಗಳನ್ನು ಸ್ಪರ್ಶಿಸುವ ಅದೃಷ್ಟ ಮಾತ್ರ ಪಾತರಗಿತ್ತಿಗಳಿಗೆ.

ಈ ಲಂಟಾನ ಕಮಾರಾ ಸಸ್ಯಗಳ ತವರು  ಅಮೆರಿಕಾದ ಉಷ್ಣವಲಯ. ವರ್ಷಪೂರ್ತಿ ಗಾಢವಾದ ಸುಗಂಧ ಹೊರಸೂಸುತ್ತಾ ನೋಡಲು ಸಣ್ಣ ಸಣ್ಣ ಗುಲಾಬಿಗಳನ್ನು ಜೋಡಿಸಿಟ್ಟಂತೆ ಕಾಣುವ ಲಂಟಾನ ಹೂಗಳ ಸೊಬಗು ವಿಶಿಷ್ಟ. ಈ ಹೂಗಳು ಚಿಟ್ಟೆ ಮತ್ತು ಪತಂಗಗಳನ್ನು ತನ್ನೆಡೆಗೆ ಆಕರ್ಷಿಸುತ್ತವೆ.

ಲಂಟಾನ ಭಾರತದಲ್ಲಿ ಬೇಲಿ ಸಸ್ಯವಾಗಿ ಬಳಕೆಯಾಗುತ್ತಿದೆ. ಇದನ್ನು ಅಲಂಕಾರಿಕ ಸಸ್ಯವಾಗಿಯೂ ಬೆಳೆಸುವುದಿದೆ.  ವಿದೇಶದಿಂದ ಭಾರತಕ್ಕೆ ಬಂದ ಲಂಟಾನ ಅತ್ಯಂತ ಅಪಾಯಕಾರಿ ಪೊದೆ ಸಸ್ಯ ಎನ್ನುವುದರಲ್ಲಿ ಎರಡು ಮಾತಿಲ್ಲ. ಆದರೆ  ಇದರ ಎಲೆ, ಹೂ, ಹಣ್ಣುಗಳು ನೋಡಲು ಬಲು ಸುಂದರ. ಹೂಗಳ ಸೊಬಗಿಗೆ ಚಿಟ್ಟೆಗಳು ಬಹುಬೇಗ ಆಕರ್ಷಿತವಾಗುತ್ತವೆ. ಗಿಡದಲ್ಲಿ ಬಿಡುವ ಹಣ್ಣುಗಳನ್ನು ಪಕ್ಷಿಗಳು ತಿನ್ನುತ್ತವೆ.

ಲಂಟಾನ ಮೂಲತಃ ವರ್ಭಿನೇಸಿಯ ಕುಟುಂಬಕ್ಕೆ ಸೇರಿದ್ದು. ಹೆಚ್ಚಾಗಿ ಮೆಕ್ಸಿಕನ್ ಮರುಭೂಮಿಯಲ್ಲಿ ಕಂಡುಬರುವ ಕಳೆ ಸಸ್ಯವಾದ ಲಂಟಾನವನ್ನು ನಮ್ಮ ಗ್ರಾಮೀಣ ಪ್ರದೇಶಗಳಲ್ಲಿ ಬೇಲಿ ಗಿಡವೆಂದೇ ಬೆಳೆಸುತ್ತಾರೆ. ಜೂಜಕ್ಕಿ, ರೋಜಾ ಗಿಡ, ರೋಜುವಾಳಿ, ಹುಣ್ಣೆಗಿಡ ಎಂಬೆಲ್ಲಾ ಹೆಸರಿನಿಂದಲೂ ಕರೆಯುತ್ತಾರೆ. ಹೊಲ, ಗದ್ದೆ, ಕಾಡು, ಒಣಭೂಮಿ ಹೀಗೆ ಎಲ್ಲೆಂದರಲ್ಲಿ ಕೃಷಿ ಹಾಗೂ ಇತರೆ ಭೂಮಿಯನ್ನು ಆವರಿಸಿಕೊಂಡು ಪೊದೆಗಳ ರೂಪದಲ್ಲಿ ಇದು ಬೆಳೆಯುತ್ತದೆ. ಪಕ್ಷಿಗಳು ಇದರ ಹಣ್ಣುಗಳನ್ನು ತಿಂದು ಬೀಜಗಳನ್ನು ಎಲ್ಲೆಂದರಲ್ಲಿ ಬೀಳಿಸುವುದರಿಂದ ಇದರ ಸಂತಾನಾಭಿವೃದ್ಧಿ ಕ್ಷಿಪ್ರವಾಗಿ ಆಗುತ್ತದೆ.

ಲಂಟಾನ ಹರಿತವಾದ ಮುಳ್ಳುಗಳನ್ನು ಹೊಂದಿದೆ. ವಿಷಪೂರಿತವೂ ಆಗಿದೆ. ಹಾಗಾಗಿಯೇ ಇದರ ಎಲೆಗಳನ್ನು ಆಹಾರವಾಗಿ ಜಾನುವಾರುಗಳು ತಿನ್ನುವುದಿಲ್ಲ. ಆದರೆ ಕೆಲವು ಅಧ್ಯಯನಗಳ ಪ್ರಕಾರ, ಲಂಟಾನ ಗಿಡಗಳನ್ನು ಅತ್ಯಂತ ಪರಿಣಾಮಕಾರಿಯಾಗಿ ಹಸಿರೆಲೆ ಗೊಬ್ಬರವಾಗಿ ಬಳಸಿಕೊಳ್ಳಬಹುದು. ಈ ಸಸ್ಯಗಳು ಅತಿ ಹೆಚ್ಚು ಪೋಷಕಾಂಶಗಳನ್ನು ಹೊಂದಿರುವುದರಿಂದ ಭೂಮಿಯ ಫಲವತ್ತತೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿಯೂ  ಸಹಕಾರಿ. ಅಷ್ಟೇ ಅಲ್ಲದೆ ಎರೆಹುಳು ಗೊಬ್ಬರದ ತಯಾರಿಕೆಯಲ್ಲೂ ಲಂಟಾನ ಸಸ್ಯಗಳನ್ನು ಬಳಸಿಕೊಳ್ಳಬಹುದು.

**ಅಲಂಕಾರಿಕ ಸಸ್ಯಗಳಾಗಿ ಬಳಕೆ:** ಲಂಟಾನವನ್ನು ಅಲಂಕಾರಿಕ ಸಸ್ಯಗಳನ್ನಾಗಿ ಬಳಕೆ ಮಾಡುವ ಪರಿಪಾಠ ಆರಂಭವಾಗಿದೆ. ಉದ್ಯಾನವನಗಳಲ್ಲಿ ತಡೆಗೋಡೆಗಳಾಗಿ, ಕಾಂಪೌಂಡ್‌ಗಳ ಬದಲಿಗೆ ಇವುಗಳನ್ನೇ ಬೇಲಿಯಾಗಿ ಬಳಸಿ ಸುಂದರವಾಗಿ ಕಾಣುವಂತೆ ಮಾಡುತ್ತಿದ್ದಾರೆ.

ಮನೆಗಳಲ್ಲಿಯೂ ಸಹ ಸಣ್ಣ ಕುಂಡಗಳಲ್ಲಿ ಅಲಂಕಾರಿಕ ಸಸ್ಯಗಳನ್ನಾಗಿ ಲಂಟಾನ ಬೆಳೆಸುವವರಿದ್ದಾರೆ. ಲಂಟಾನ ಸಸ್ಯಗಳು ಕೆಂಪು, ಹಳದಿ, ಬಿಳಿ, ಗುಲಾಬಿ ಬಣ್ಣ, ಕಿತ್ತಳೆ ಬಣ್ಣಗಳಿಂದ ಕೂಡಿದ ಸುಂದರ ಹೂಗಳನ್ನು ಬಿಡುತ್ತವೆ. ಆಯಾಯ ಪ್ರದೇಶ, ಗಿಡದ ವಯಸ್ಸು, ಉಷ್ಣಾಂಶಗಳ ಮೇಲೆ ಅವಲಂಬಿತವಾಗಿ ಈ ಬಣ್ಣದ ಹೂಗಳು ಅರಳುತ್ತವೆ. ●



